**ಸಾಕ್ಷಿಗೆ ದಿನಾಂಕಃ25-10-2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಮುಂದುವರೆದ ಪಾಟೀ ಸವಾಲು :: ಆರೋಪಿ ಪರ ಶ್ರೀಮತಿ ಸಿ ಎನ್ ಜೆ ವಕೀಲರಿಂದ ::**

ನಾನು ವ್ಯವಸಾಯ ಹೊರತುಪಡಿಸಿ ಸಣ್ಣ ಮಟ್ಟದಲ್ಲಿ ಚೀಣಿ ವ್ಯವಹಾರ ಸಹ ಮಾಡಿಕೊಂಡಿರುತ್ತೇನೆ. ನನಗೆ ವ್ಯವಸಾಯದಿಂದ ವಾರ್ಷಿಕ ಸುಮಾರು 5 ಲಕ್ಷ ಮತ್ತು ಚೀಣಿ ವ್ಯವಹಾರದಿಂದ ವಾರ್ಷಿಕ ಸುಮಾರು 3-4 ಲಕ್ಷ ಲಾಭ ಬರುತ್ತದೆ. ನನ್ನ ಬಳಿ ಅಡಿಕೆ ತೋಟ ಇರುತ್ತದೆ. ವಾರ್ಷಿಕವಾಗಿ ನಮ್ಮ ಅಡಿಕೆ ತೋಟದಲ್ಲಿ 10 ಕ್ವಿಂಟಾಲ್ ಒಣ ಅಡಿಕೆ ಸಿಗುತ್ತದೆ. ನನಗೆ ಒಂದು ಮಗಳಿದ್ದು ಅವಳು 7 ನೇ ತರಗತಿ ವಿದ್ಯಾಭ್ಯಾಸ ಮಾಡುತ್ತಿದ್ದಾಳೆ. ನನಗೆ ವರ್ಷದಲ್ಲಿ ಎಲ್ಲಾ ಖರ್ಚುಗಳನ್ನು ಹೊರತುಪಡಿಸಿ ಸುಮಾರು 4-5 ಲಕ್ಷ ರೂಪಾಯಿ ಹಣ ಉಳಿತಾಯ ಇರುತ್ತದೆ. ನನ್ನ ಕುಟುಂಬಕ್ಕೆ ಬಿ ಪಿ ಎಲ್ ಕಾರ್ಡ್ ಇರುತ್ತದೆ. ಸಾಮಾನ್ಯವಾಗಿ ಬಿ ಪಿ ಎಲ್ ಕಾರ್ಡ್ ಅನ್ನು ಕೇವಲ 1,25,000/- ಆದಾಯಕ್ಕಿಂತ ಕಡಿಮೆ ಇರುವವರಿಗೆ ನೀಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರ್ಥಿಕವಾಗಿ ದುರ್ಬಲರಿಗೆ ಮಾತ್ರ ಬಿ ಪಿ ಎಲ್ ಕಾರ್ಡ್ ಅನ್ನು ವಿತರಣೆ ಮಾಡಲಾಗುತ್ತದೆ ಎಂದರೆ ಸರಿಯಲ್ಲ. ನಾನು ಆದಾಯ ತೆರಿಗೆ ಪಾವತಿ ಮಾಡುವುದಿಲ್ಲ.

20 ಸಾವಿರ ರೂಪಾಯಿಗಿಂತ ಅಧಿಕ ಹಣವನ್ನು ನಗದು ರೂಪದಲ್ಲಿ ನೀಡುವಂತಿಲ್ಲ ಎಂಬ ಕಾನೂನು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ1 ಚೆಕ್ ನಲ್ಲಿ ಇರುವ ಅಂಶಗಳನ್ನು ಆರೋಪಿಯೇ ಬರೆದಿರುತ್ತಾರೆ. ಸಾಕ್ಷಿಯು ಸ್ವತಃ ಸಹಿ ಮಾತ್ರ ನನ್ನ ಸಮಕ್ಷಮ ಹಾಕಿರುತ್ತಾರೆ ಎಂದು ನುಡಿದಿರುತ್ತಾರೆ. ನಿಪಿ1 ಚೆಕ್ ನಲ್ಲಿ ಇರುವ ಆರೋಪಿಯ ಸಹಿಗೂ ಹಾಗೂ ಬರವಣಿಗೆಗೂ ಶಾಹಿಯ ಬದಲಾವಣೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಆರೋಪಿ ಹಾಗೂ ಅವರ ಗಂಡ ಕೋಳಿ ಅಂಗಡಿಯ ವ್ಯವಹಾರಕ್ಕೆ ಸಂಬಂಧಪಟ್ಟಂತೆ ನನ್ನಿಂದ 5 ಲಕ್ಷ ರೂಪಾಯಿ ಹಣವನ್ನು ಸಾಲವಾಗಿ ಪಡೆದಿರುತ್ತಾರೆ. ಕೋಳಿ ಅಂಗಡಿಯನ್ನು ಮಾಡಲು 5 ಲಕ್ಷ ಹಣ ಖರ್ಚು ಬರುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಯಾವುದದೇ ವ್ಯಕ್ತಿಗೆ ಸಾಲ ನೀಡುವಾಗ ಅವರ ಆರ್ಥಿಕ ಪರಿಸ್ದಿತಿ ಬಗ್ಗೆ ಪರಿಶೀಲನೆ ಮಾಡಲಾಗುತ್ತದೆ ಎಂದರೆ ಸಾಕ್ಷಿಯು ಆರೋಪಿ ಮತ್ತು ಅವರ ಗಂಡನ ಆರ್ಥಿಕ ಪರಿಸ್ದಿತಿ ಆ

ಸಮಯದಲ್ಲಿ ಸರಿಯಾಗಿತ್ತು ಎಂದು ನುಡಿಯುತ್ತಾರೆ. ನಾನು ಹೇಳುತ್ತಿರುವ ಸಾಲವನ್ನು ಆರೋಪಿಯ ಗಂಡನಿಗೆ ನೀಡಿರುತ್ತೇನೆ ಎಂದರೆ ಸಾಕ್ಷಿಯು ಆರೋಪಿ ಹಾಗೂ ಅವರ ಗಂಡನಿಗೆ ಇಬ್ಬರಿಗೂ ಸೇರಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿಯು ನನ್ನಿಂದ ಯಾವತ್ತು 5 ಲಕ್ಷ ಹಣವನ್ನು ಸಾಲವಾಗಿ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ದುರುದ್ದೇಶದಿಂದ ಈ ಸುಳ್ಳು ಪ್ರಕರಣವನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ಅಂಗನವಾಡಿ ಶಿಕ್ಷಕಿಯಾದ ಕಾರಣ ಅವರ ಚೆಕ್ ಅನ್ನು ನಾನು ತೆಗೆದುಕೊಂಡು ಅದನ್ನು ಈ ಪ್ರಕರಣದಲ್ಲಿ ದುರುಪಯೋಗಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಹಾಗೂ ಆರೋಪಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಆಗದ ಕಾರಣ ಆರೋಪಿ ನನಗೆ ಯಾವುದೇ ಹಣವನ್ನು ಕೊಡಲು ಭಾದ್ಯಸ್ಥರಾಗಿರುವುದಿಲ್ಲ ಎಂದರೆ ಸರಿಯಲ್ಲ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

sd/-
ಪ್ರಧಾನ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ತರೀಕೆರೆ.

ಸಾಕ್ಷಿಯ ಸಹಿ::